ವಿಷಯ: ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಗುರುತಿಸಲಾದ ಕೊಳಚೆ ಪ್ರದೇಶಗಳು.

1114 (1568)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗುರುತಿಸಲಾಗಿರುವ ಕೊಳಚೆ ಪ್ರದೇಶಗಳು ಯಾವುವು?

ಆ) ಕಳೆದ ಎರಡು ವರ್ಷಗಳಿಂದ ಕೊಳಚೆ ನಿರ್ಮೂಲನೆಗಾಗಿ ಸದರಿ ಜಿಲ್ಲೆಗಳಿಗೆ ಖರ್ಚು ಮಾಡಿದ ಹಣ ಎಷ್ಟು? ಯಾವ ಉದ್ದೇಶಗಳಿಗಾಗಿ ಖರ್ಚುಮಾಡಲಾಗಿದೆ?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಈ ಕೆಳಕಂಡ ಕೊಳಚೆ ಪ್ರದೇಶವನ್ನು ಗುರುತಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ

1. ಕೊಡಿಯಾಲಗುಡ್ಡೆ, ಮಂಗಳೂರು
2. ಬಸಂತಿ ರಸ್ತೆ, ಮಂಗಳೂರು
3. ದೊಂಗರಕೇರಿ, ಮಂಗಳೂರು
4. ಮಠದ ಕೇರಿ, ಪಶ್ಚಿಮ ಮಂಗಳೂರು
5. ಕಂದಕವಾರ್ಡು, ಮಂಗಳೂರು
6. ಕುದುಕುಡಿ ಗುಡ್ಡ, ಮಂಗಳೂರು
7. ಪಾಂಡೇಶ್ವರ, ಮಂಗಳೂರು
8. ಹಂಪನಕಟ್ಟೆ, ಮಂಗಳೂರು
9. ಕೊತ್ತನಕುಂಟೆ, ಉಳ್ಳಾಲ
10. ತೊಕ್ಕೋಟು, ಹಳೇಪೇಟೆ, ಉಳ್ಳಾಲ

11. ಬಿಜಾಪುರ ಕಾಲೋನಿ, ಮುಲ್ಕಿ

12. ಜ್ಯೋತಿ ನಗರ, ಸುರತ್ಕಲ್

ಉಡುಪಿ ಜಿಲ್ಲೆ

1. ದೊಡ್ಡನಗುಡ್ಡೆ, ಉಡುಪಿ

2. ಧನಶಾಲ, ಕಾರ್ಕಳ

3. ಬಂದಿಮಠ, ಕಾರ್ಕಳ

4. ಬಾಂಗ್ಲೆಗುಡ್ಡ, ಕಾರ್ಕಳ

5. ಹವಾಲ್ದಾರ ಬೆಟ್ಟ, ಕಾರ್ಕಳ

6. ದುರ್ಗಾ ನರ್ಸಿಂಗ್ ಹೋಂ ಹತ್ತಿರ ಕಾರ್ಕಳ

7. ಕೊಪ್ಪಳ ಕೊರಗರಸೇತುವೆ, ಕಾರ್ಕಳ

8. ರಾಣಿಯರ ಕೇರಿ, ಕಾರ್ಕಲ

9. ಬೊಬ್ಬಳ ಕೊರಗರ, ಕಾರ್ಕಳ

10. ಐತ್‌ಕಟ್ಟೆ, ಕಾರ್ಕಳ

ಆ) ಈ ಎರಡು ಜಿಲ್ಲೆಯ 4 ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ 1996-97 ಮತ್ತು 1997-98ನೇ ಸಾಲಿನಲ್ಲಿ ಒಟ್ಟು 29.52 ಲಕ್ಷ ರೂ.ಗಳನ್ನು ನಿಗಧಿಪಡಿಸಲಾಗಿದೆ. ವಿವರ ಈ ಕೆಳಗಿನಂತಿದೆ.

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿ	ನಿಗಧಿಪಡಿಸಿದ ಹಣ	ಖರ್ಚು ಮಾಡಿದ ಹಣ
	ದಕ್ಷಿಣ ಕನ್ನಡ ಜಿಲ್ಲೆ 1996-97			
1.	ಮುಲ್ಕಿ ಪಟ್ಟಣದ ಬಿಜಾಪುರ ಕಾಲೋನಿ	28 ಪ್ರತ್ಯೇಕ ಶೌಚಾಲಯ	2.52	ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗಿದ್ದು ಕೆಲಸ ಪ್ರಾರಂಭಿಸಬೇಕಾಗಿದೆ
	1997-98			
1.	ಮುಲ್ಕಿ ಪಟ್ಟಣದ ಬಿಜಾಪುರ ಕಾಲೋನಿ	44 ಪ್ರತ್ಯೇಕ ಶೌಚಾಲಯ (ಎನ್.ಎಸ್.ಡಿ.ಪಿ.ಯೋಜನೆಯಡಿ)	6.75	-ಡಿಟೋ-
2.	ಉಳ್ಳಾಲ ಪಟ್ಟಣದ ತೊಕ್ಕೋಟು ಹಳೇಪೇಟೆ	ಕಿರು ನೀರು, ಸೈಜು ಕಲ್ಲಿನ ಚರಂಡಿ, ಮಾರ್ಕೆಟ್ ದುರಸ್ತಿ ಲ್ಯಾಟರೈಟ್ ಕಕಲ್ಲಿನ ಚರಂಡಿ (ಎಸ್.ಎಸ್.ಡಿ.ಪಿ.ಯೋಜನೆಯಡಿ)	6.75	ಕೆಲಸದ ಆದೇಶ ನೀಡಿದ್ದು ಕೆಲಸ ಪ್ರಾರಂಭಿಸಬೇಕಿದೆ

ಉಡುಪಿ ಜಿಲ್ಲೆ 1997-98

1.	ದೊಡ್ಡನಗುಡ್ಡೆ	10 ಪ್ರತ್ಯೇಕ ಶೌಚಾಲಯ ಹಾಗೂ ಸೈಜು ಕಲ್ಲಿನ ಚರಂಡಿ (ಎನ್.ಎಸ್.ಡಿ.ಪಿ. ಯೋಜನೆಯಡಿ)	6.75	ಟೆಂಡರ್ ಕರೆಯಲಾಗಿದ್ದು ಇತ್ಯರ್ಥಗೊಳಿಸಬೇಕಾಗಿದೆ.
2.	ಕಾರ್ಕಳಪಟ್ಟಣದ ಬೊಬ್ಬಳ ಕೊರಗೆರೆ	ಸಮುದಾಯ ಭವನ, ಮಳೆ ನೀರಿನ ಚರಂಡಿ (ಎನ್.ಎಸ್.ಡಿ.ಪಿ. ಯೋಜನೆಯಡಿ)	6.75	-ಡಿಟೋ-

ಸುರತ್ಕಲ್ ಪಟ್ಟಣದ ಜ್ಯೋತಿನಗರ ಕೊಳಚೆ ಪ್ರದೇಶವನ್ನು ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ 6.75 ಲಕ್ಷರೂ.ಗಳ ಅಂದಾಜಿನಲ್ಲಿ ಅಭಿವೃದ್ಧಿ ಪಡಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಆದರೆ ಈ ಪ್ರದೇಶವು ಕಾಯಿದೆ ಅಡಿ ಘೋಷಿತವಾಗಿಲ್ಲದ ಕಾರಣ ಕಾಮಗಾರಿ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಘೋಷಣೆಯ ಪ್ರಸ್ತಾವನೆಯು ಜಿಲ್ಲಾಧಿಕಾರಿಯವರ ಬಳಿ ಪರಿಶೀಲನೆಯಲ್ಲಿದ್ದು, ಇಷ್ಟರಲ್ಲೇ ಘೋಷಣೆಯಾಗಲಿದೆ. ಘೋಷಣೆಯ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.